# ರಿಷಭ್ ರಿಹ್ಯಾಬ್... ಸೂಪರ್ಬ್

**ರಿಷಭ್ ಪಂತ್ ಕ್ರಿಕೆಟ್ ಮರುಹುಟ್ಟು ಪಡೆದುಕೊಂಡಿದೆ. ನಾಯಕರಾಗಿಯೂ ಅವರು 'ಡೆಲ್ಲಿ ಕ್ಯಾಪಿಟಲ್ಸ್' ತಂಡವನ್ನು ಮುನ್ನಡೆಸುತ್ತಿರುವ ರೀತಿ ಚೆನ್ನಾಗಿದೆ. ಹಳೆಯ ಚಲನಶೀಲತೆಯನ್ನು ಮರಳಿ ಪಡೆಯುತ್ತಿರುವ ಅವರು ಸದ್ಯದ ಕುತೂಹಲಕರ ಕಥಾನಾಯಕ.**

**■ ವಿಶಾಖ ಎನ್.**



ಈ ಸಲ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನಲ್ಲಿ ಏಪ್ರಿಲ್ 18ರವರೆಗೆ ಅತಿ ಹೆಚ್ಚು ಅರ್ಧಶತಕ ಹೊಡೆದವರ ಪಟ್ಟಿಯ ಮೇಲೆ ಕಣ್ಣಾಡಿಸಿ. ಹೆನ್ರಿಚ್ ಕ್ಲಾಸೆನ್, ಸಂಜು ಸ್ಯಾಮ್ಸನ್ ಇಬ್ಬರೂ ಮೂರು ಮೂರು ಅರ್ಧಶತಕ ಗಳಿಸಿದ್ದಾರೆ. ದಿನೇಶ್ ಕಾರ್ತಿಕ್, ಫಿಲ್ ಸಾಲ್ಟ್, ಕ್ವಿಂಟನ್ ಡಿ ಕಾಕ್, ರಿಷಭ್ ಪಂತ್, ತಲಾ ಎರಡು ಅರ್ಧಶತಕಗಳನ್ನು ದಾಖಲಿಸಿರುವುದು ಕಣ್ಣಿಗೆ ರಾಚುತ್ತದೆ. ಕ್ಲಾಸೆನ್ ಈ ಅವಧಿಯಲ್ಲಿ 253 ರನ್‌ಗಳನ್ನು ಕಲೆಹಾಕಿದ್ದರೆ, ರಿಷಭ್ ಪಂತ್ ಖಾತೆಗೆ 210 ರನ್ ಜಮೆಯಾಗಿವೆ. ದಿನೇಶ್ ಕಾರ್ತಿಕ್ 226 ರನ್‌ಗಳನ್ನು ಸೇರಿಸಿದ್ದಾರೆ. ಸಾಲ್ಟ್ ಕೂಡ 201 ರನ್‌ಗಳನ್ನು ಗಳಿಸಿ ಒಳ್ಳೆಯ ಫಾರ್ಮ್‌ನಲ್ಲಿ ಇದ್ದಾರೆ.

ಈಗ ಹೆಸರಿಸಿದ ಎಲ್ಲರೂ ವಿಕೆಟ್ ಕೀಪರ್‌ಗಳು ಎನ್ನುವುದು ವಿಶೇಷ. ಇವರಲ್ಲದೆ ಮಹೇಂದ್ರ ಸಿಂಗ್ ಧೋನಿ, ಇಶಾನ್ ಕಿಶನ್, ಕೆ.ಎಲ್. ರಾಹುಲ್, ನಿಕೊಲಸ್ ಪೂರನ್ ಇವರೆಲ್ಲರೂ ಪ್ರತಿಭಾವಂತರ ಸಾಲಿನಲ್ಲಿ ಉಳಿದಿರುವ ವಿಕೆಟ್ ಕೀಪರ್‌ಗಳು. ಇವರು ಯಾವ ಹಂತದಲ್ಲಿ ಬೇಕಾದರೂ ಎದುರಾಳಿ ಬೌಲರ್‌ಗಳ ಕೈಯಿಂದ ಪಂದ್ಯವನ್ನು ಕಿತ್ತುಕೊಂಡು ಹೋಗಬಲ್ಲರು. ಮಹೇಂದ್ರ ಸಿಂಗ್ ಧೋನಿ ಒಂದೇ ಓವರ್‌ನಲ್ಲಿ 'ಮುಂಬೈ ಇಂಡಿಯನ್ಸ್' ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ಮೂರು ಸಿಕ್ಸರ್ ಹೊಡೆದ ಇನಿಂಗ್ಸ್ ಅನ್ನು ನೆನಪಿಸಿಕೊಂಡರೆ ಇದಕ್ಕೆ ಪುಷ್ಟಿ ಸಿಕ್ಕೀತು. ಇಶಾನ್ ಕಿಶನ್ ಒಂದು ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್‌ಗಳನ್ನು ಪುಡಿಗಟ್ಟಿದ್ದು ಕೂಡ ಗಮನಾರ್ಹ. ನಿಕೊಲಸ್ ಪೂರನ್ ಅಂತೂ ನಿಂತಲ್ಲೇ ಸಲೀಸಾಗಿ ಸಿಕ್ಸರ್ ಹೊಡೆದು ವೇಗದ ಬೌಲರ್‌ಗಳಿಗೂ ಸವಾಲಿನ ಕೂರಂಬು ತೂರಬಲ್ಲರು. ಕೆ.ಎಲ್. ರಾಹುಲ್ ತಂತ್ರದ ವಿಷಯದಲ್ಲಿ ಮಹಾ ಅನುಭವಿ.

ವಿಕೆಟ್‌ಗಳ ಹಿಂದೆ ನಿಂತು ಪಿಚ್ ವರ್ತನೆ ಹಾಗೂ ಬೌಲರ್‌ಗಳು ಹಾಕುವ ಎಸೆತಗಳ ವೇಗ ವೈವಿಧ್ಯವನ್ನು ತುಂಬಾ ಹತ್ತಿರದಿಂದ ನೋಡುವ ವಿಕೆಟ್ ಕೀಪರ್‌ಗಳಿಗೆ ಬ್ಯಾಟಿಂಗ್‌ಗೆ ಇಳಿದಾಗ ಅದೇ ವರದಾನವಾಗುವುದೇ? ವೃದ್ಧಿಮಾನ್ ಸಹ ತರಹದ ಬ್ಯಾಟರ್ ಈ ಪ್ರಶ್ನೆಗೆ ಹಿಂದೊಮ್ಮೆ ಹೌದೆಂದು ಉತ್ತರಿಸಿದ್ದರು. ಧೋನಿ ಅವರಂತೂ ಈ ಅಧ್ಯಯನದ ವಿಷಯದಲ್ಲಿ ಪಿಎಚ್.ಡಿ.ಯನ್ನೇ ಮಾಡಿದ್ದಾರೆ. ಇವರೆಲ್ಲರ ಪೈಕಿ ಸದ್ಯಕ್ಕೆ ನಮ್ಮ ಗಮನ ಕೇಂದ್ರಿತವಾಗಬೇಕಿರುವುದು ರಿಷಭ್ ಪಂತ್ ಅವರತ್ತ.

ಕಳೆದ ಮಾರ್ಚ್ 12ರಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ರಿಷಭ್ ಪಂತ್ ಅವರು ಸ್ಪರ್ಧಾತ್ಮಕ ಕ್ರಿಕೆಟ್ ಆಡಲು ಸಂಪೂರ್ಣ ಫಿಟ್ ಎಂದು ಪ್ರಕಟಿಸಿತು. ಐಪಿಎಲ್ ಹಣ ಗಳಿಕೆಯ ಮಾರ್ಗ ಎಂದು ಬಹುತೇಕರು ಆಟಗಾರರನ್ನು ಟೀಕಿಸುವ ಈ ಸಂದರ್ಭದಲ್ಲಿ ರಿಷಭ್ ಪಾಲಿಗೆ ಅದು ನಿಕಷದಂತೆ ಕಾಣುತ್ತಿದೆ. ಅವರು ಫಿಟ್ ಎಂದು ಪ್ರಕಟಣೆ ಹೊರಬಿದ್ದ ಎರಡೇ ದಿನಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕತ್ವವನ್ನೂ ಅವರಿಗೆ ವಹಿಸಲಾಯಿತು.

2022ರ ಡಿಸೆಂಬರ್ 30ರಂದು ರೂರ್ಕಿ ಬಳಿ ರಿಷಭ್ ಪಂತ್ ಕಾರು ಅಪಘಾತಕ್ಕೀಡಾಯಿತು. ಅವರ ಬಲ ಮಂಡಿ ತಿರುಚಿಕೊಂಡಿತು. ಹೆಚ್ಚೂಕಡಿಮೆ 90 ಡಿಗ್ರಿಯಷ್ಟು ಅದು ತಿರುಚಿಕೊಂಡಿದ್ದನ್ನು ಓದಿಯೇ ಅನೇಕರಿಗೆ ಗಾಬರಿಯಾಗಿತ್ತು. ಡೆಹ್ರಾಡೂನ್ ಆಸ್ಪತ್ರೆಯಲ್ಲಿ ಆಗ ಈ ಕ್ರಿಕೆಟಿಗ